SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278


Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –33 ದಿನಾಂಕ : 23–02–2025

## 15 ರೋಟರಿ ಕ್ಲಬ್‌ಗಳು ಸೇರಿ ಶಿವಮೊಗ್ಗ ನಗರದ ಅಂಬೇಡ್ಕರ್ ಭವನದಲ್ಲಿ ರೋಟರಿಯ ಹುಟ್ಟು ಹಬ್ಬದ ಸವಿನೆನಪಿಗಾಗಿರುವ "ವಿಶ್ವ ಅರಿವಿನ ದಿನಾಚರಣೆಯ" ಕಾರ್ಯಕ್ರಮ




ದಿನಾಂಕ: 23.02.2025 ರಂದು ನಮ್ಮ ಕ್ಲಬ್‌ನ ಕೌಟುಂಬಿಕ ಸ್ನೇಹಮಿಲನ ಹಾಗೂ ಶಿವಮೊಗ್ಗೆಯ ಹಾಗೂ ಭದ್ರಾವತಿ, ಶಿಕಾರಿಪುರ ಕ್ಲಬ್ ಸೇರಿ ವಲಯ 10 ಮತ್ತು 11 ರಒಟ್ಟು 15 ರೋಟರಿ ಕ್ಲಬ್‌ಗಳು ಸೇರಿ ಶಿವಮೊಗ್ಗ ನಗರದ ಅಂಬೇಡ್ಕರ್ ಭವನದಲ್ಲಿ ರೋಟರಿಯ ಹುಟ್ಟು ಹಬ್ಬದ ಸವಿನೆನಪಿಗಾಗಿರುವ "ವಿಶ್ವ ಅರಿವಿನ ದಿನಾಚರಣೆಯ" ಕಾರ್ಯಕ್ರಮವನ್ನು ಅತ್ಯಂತ ಅದ್ದೂರಿಯಿಂದ ನಮ್ಮ ರೋಟರಿ ಕ್ಲಬ್‌ನ ನೇತೃತ್ವದಲ್ಲಿ ಸಂಜೆ 6.30 ಕ್ಕೆ ಏರ್ಪಡಿಸಲಾಗಿತ್ತು ಅಂದು ಮುಖ್ಯ ಅತಿಥಿ ಹಾಗೂ ಉಪನ್ಯಾಸಕರಾಗಿ ನಗರದ ಡಯೆಟ್ ಸಂಸ್ಥೆಯ ಹಿರಿಯ ಉಪನ್ಯಾಸಕರಾದ ಡಾ. ಹರಿಪ್ರಸಾದ್‌ರವರು ಆಗಮಿಸಿ "ಸಾಮಾಜಿಕ ಸಾಮರಸ್ಯ" ಎಂಬ ವಿಚಾರದಲ್ಲಿ ಉತ್ತಮೋತ್ತಮ ಹಾಗೂ ಮನ – ಕಣ್ತುಂಬಿ ಬರುವ ಭಾವನೆಗಳುಳ್ಳ ಉದಾಹರಣೆಗಳೊಂದಿಗೆ ಮಾತನಾಡಿದರು.

2ನೇ ಪುಟಕ್ಕೆ

### ಈ ವಾರದ ಸಭೆ

ದಿನಾಂಕ: 05–03–2025, ಬುಧವಾರ ಸಂಜೆ 6:45 ರಿಂದ

## CLUB ASSEMBLY

Official Club Visit of

**Rtn. Nagaraj S.R.**

Asst. Governor Zone -10

**ಸಹಾಯಕ ಗವರ್ನರ್‌ರವರ ಅಧಿಕೃತ ಭೇಟಿ**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ




ಆರಂಭದಲ್ಲಿ ಕು.ಪರಿಪೂರ್ಣ ಭಟ್ ಇವರಿಂದ ಚಂದದ ಸ್ವಾಗತ ನೃತ್ಯವಾಯಿತು. ಜಯ ಜಯ ಸ್ವಾಮಿ ಜಯ ಜಯ ಎಂಬ ಹಾಡಿಗೆ ತಮ್ಮ ಪ್ರೌಢಿಮೆಯ ನೃತ್ಯ ಪ್ರದರ್ಶನ ನೀಡಿದರು.

ಅಂದಿನ ಸಮಾರಂಭದ ವೇದಿಕೆಯಲ್ಲಿ ಡಾ. ಹರಿಪ್ರಸಾದ್, ರೊ. ಸೂರ್ಯನಾರಾಯಣ ಉಡುಪರು, ರೊ. ಪಿಡಿಜಿ. ಡಾ.ಪಿ.ನಾರಾಯಣ, ಚುನಾಯಿತ ಜಿಲ್ಲಾ ಗವರ್ನರ್ 2027–28 ಆದ ರೊ. ವಸಂತ ಹೋಬಳೀದಾರ್, ರೊ.ಎಸ್.ಆರ್. ನಾಗರಾಜ್, ರೊ, ಎಸ್.ಆರ್.ಲಕ್ಷ್ಮೀನಾರಾಯಣ, ರೊ.ಎನ್. ರಮೇಶ್, ರೊ.ಸುರೇಶ್ ಹೆಚ್.ಎಂ, ರೊ.ಕೆ.ಪಿ.ಎಸ್. ಸ್ವಾಮಿ, ರೊ.ರವೀಂದ್ರನಾಥ್ ಐತಾಳ್, ರೊ.ಎನ್.ಜಿ. ಉಷಾರವರು ಉಪಸ್ಥಿತರಿದ್ದರು. ಹಿಂದಿನ ಸಾಲಿನಲ್ಲಿ ಎಲ್ಲಾ 15 ರೋಟರಿ ಕ್ಲಬ್‌ನ 15 ಅಧ್ಯಕ್ಷರುಗಳು ಉಪಸ್ಥಿತರಿದ್ದುದು ವಿಶೇಷವಾಗಿತ್ತು.

ಕಾರ್ಯಕ್ರಮದ ಆರಂಭವು ರೊ.ವನಿತಾ ಸಂದೀಪರವರ "ನಮ್ಮಮ್ಮ ಶಾರದೇ ಉಮಾ ಮಹೇಶ್ವರಿ ನಿಮ್ಮೊಳಗಿಹನಾರಮ್ಮ" ಹಾಡಿನ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ನಮ್ಮ ಕ್ಲಬ್‌ನ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು" ವಿಶ್ವ ಅರಿವಿನ ದಿನದ ಆಚರಣೆಯ ಸಭೆಗೆ ಸರ್ವರನ್ನು ಸ್ವಾಗತಿಸಿದರು. ರೊ.ಪಿಡಿಜಿ. ಡಾ.ಪಿ. ನಾರಾಯಣರವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನಾಡುತ್ತಾ ನೂರಾರು ವರ್ಷಗಳ ಹಿಂದೆ ಇದೇ ಸಮಯದಲ್ಲಿ ಚಿಕಾಗೋ ನಗರದಲ್ಲಿ ಯೂನಿಟಿ ಬಿಲ್ಡಿಂಗ್‌ನಲ್ಲಿ ಕೇವಲ ನಾಲ್ಕು ಜನರಿಂದ ಆರಂಭವಾದ ರೋಟರಿಯು ಇಂದು ವಿಶ್ವದಾದ್ಯಂತ ಅತಿದೊಡ್ಡ ಸಂಸ್ಥೆಯಾಗಿ ಬೆಳೆದು 202 ದೇಶಗಳಲ್ಲಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು, 32000 ಕ್ಲಬ್‌ಗಳನ್ನು ಹೊಂದಿ, 12 ಲಕ್ಷಜನರೋಟರಿ ಸದಸ್ಯರನ್ನು ಹೊಂದಿದೆ. ಅಲ್ಲದೇ ವಿಶ್ವದಲ್ಲಿ ಶಾಂತಿಯನ್ನು ಮೂಡಿಸುವುದಕ್ಕಾಗಿ, ಬಡತನವನ್ನು ತೊಲಗಿಸಿ, ರಾಮರಾಜ್ಯವನ್ನಾಗಿ ಮಾಡಬೇಕೆಂಬ ಕನಸಿನೊಂದಿಗೆ ಮುನ್ನಡಿಯಿಡುತ್ತಿದೆ. ವಿಶ್ವದ ಯಾವುದೇ ಭಾಗದಲ್ಲಿ (ಉದಾ: ಶಿವಮೊಗ್ಗ) ಸಮಸ್ಯೆಗಳುಂಟಾದಲ್ಲಿ ಅದನ್ನು ಇಡೀ ವಿಶ್ವದ ಸಮಸ್ಯೆ ಎಂದು ಪರಿಗಣಿಸಿ ಆ ಬಗ್ಗೆ ಉದಾರತೆಯನ್ನು ಹೊಂದಿ ನೆರವನ್ನು ನೀಡುತ್ತಿದೆ. ಇದರೊಂದಿಗೆ ವಿಶ್ವಶಾಂತಿಗೆ ಕಂಕಣಬದ್ಧವಾಗಿದೆ. ವೆಸ್ಟ್ ಸ್ಪ್ರಿಂಗ್ ಫೀಲ್ಡ್‌ಎಂಬ ಅಮೇರಿಕೆಯಲ್ಲಿನ ರೋಟರಿ ಶಿವಮೊಗ್ಗ ಮತ್ತಿನ್ನಿತರ ಭಾಗಗಳಿಗೆ ಗ್ಲೋಬಲ್ ಗ್ರಾಂಟ್ ಮೂಲಕ ಸಹಕರಿಸುತ್ತಿದೆ ಎಂಬುದನ್ನು ವಿವರವಾಗಿ ತಿಳಿಸಿ, ವಿಶ್ವದೆಲ್ಲೆಡೆ ಶಾಶ್ವತವಾದ ಶಾಂತಿ ನೆಲೆಸಬೇಕು ಎನ್ನುವ ಉದ್ದೇಶದಿಂದ ಜಾಗತಿಕವಾಗಿ ಕಾರ್ಯಕ್ರಮಗಳನ್ನು ರೋಟರಿ ಹಮ್ಮಿಕೊಳ್ಳುತ್ತಿದೆ. Think Globally - Act Locally ಎನ್ನುವುದು ಇದರ ಧ್ಯೇಯವಾಗಿದೆ ಎಂದರು.

ರೊ. ಬಿ. ಸುರೇಶ್‌ಕುಮಾರ್ ಅಧ್ಯಕ್ಷರು ರೋಟರಿ ಕ್ಲಬ್ ಶಿವಮೊಗ್ಗ ಮಿಡ್‌ಟೌನರವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ಕಾರ್ಯಕ್ರಮವು ದೀಪ ಪ್ರಜ್ವಲನದ ಮೂಲಕ ಉದ್ಘಾಟನೆಯಾಯಿತು. ಇದೇ ಸಂದರ್ಭದಲ್ಲಿ 2027–28 ನೇ ಸಾಲಿಗೆ ರೋಟರಿ ಜಿಲ್ಲೆ 3182 ರಗವರ್ನರ್ ಆಗಿ (District Governor Nominee Designate) ನಡೆದ ಚುನಾವಣೆಯಲ್ಲಿ ಹೆಚ್ಚಿನ ಬಹುಮತದಿಂದ ಆಯ್ಕೆಯಾದ ರೋಟರಿ ಕ್ಲಬ್ ಶಿವಮೊಗ್ಗ ಪೂರ್ವದ ರೊ. ವಸಂತ ಹೋಬಳಿದಾರ್‌ರವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಇವರನ್ನು ವಲಯ 11 ರ ಸಹಾಯಕ ಗವರ್ನರ್ ರೊ.ಸುರೇಶ್ ಹೆಚ್.ಎಂ.ರವರು ಸಭೆಗೆ ಪರಿಚಯ ಮಾಡಿದರು.

ಈ ಸಂದರ್ಭದಲ್ಲಿ ಸನ್ಮಾನಕ್ಕೆ ಉತ್ತರಿಸಿ ಮಾತನಾಡಿದ ರೊ.ವಸಂತ ಹೋಬಳೀದಾರ್‌ರವರು ನಾವು ಎಲ್ಲೇ ಏನೇ ಸಾಧನೆ ಮಾಡಿದರು ನಮ್ಮ ಊರಿನಲ್ಲಿ ಅಥವಾ ಮನೆಯಲ್ಲಿ ಸಿಗುವ ಸನ್ಮಾನಕ್ಕೆ ಬೇರೆಯದೇ ಆದ ವಿಶೇಷ ಗೌರವವಿದೆ ಎಂದರು. ನಮ್ಮ ಊರಿನಲ್ಲಿ ನಮ್ಮ ಜನರ ಮನಸ್ಸನ್ನು ನಾವು ಗೆಲ್ಲಬೇಕು. ಈ ನಮ್ಮ ರೋಟರಿ ಅದ್ಭುತವಾದ ಸಂಸ್ಥೆ. 3 ವರ್ಷಗಳ ಮುಂಚೆಯೇ ಈ ಗವರ್ನರುಗಳ ಆಯ್ಕೆಗೆ ಕಾರಣ ಅವರುಗಳಿಗೆ ಅನುಭವ ದೊರಕಲಿ ಎಂಬುದಾಗಿದೆ. ಇದರಿಂದ ನನಗೊಂದು ಆತ್ಮವಿಶ್ವಾಸ ಬಂದಿದೆ. ಚುನಾವಣೆ ಬೇಡವಾಗಿದ್ದರೂ ಚುನಾವಣೆಯಾಗಿದ್ದುದು ನನಗೆ ಅನುಕೂಲವಾಯಿತು. ಏಕೆಂದರೆ, ಇದರಿಂದ ನನ್ನೊಂದಿಗಿರುವವರ ಅರಿವಾಯಿತು ಎಂದರು. ಶಿವಮೊಗ್ಗ ಹಲವಾರು ಗವರ್ನರುಗಳನ್ನು ಪಡೆದು ಉತ್ತಮವಾದ ಕೆಲಸ ಮಾಡಿದೆ. ಎಲ್ಲರೂ ಕೈ ಜೋಡಿಸಲಿದ್ದಾರೆ ಎಂಬ ಮಾನಸಿಕ ದೃಢತೆ ನನಗೆ ಬಂದಿದೆ ಎಂದರು. ಗೆಲುವಿಗೆ ಸಹಕರಿಸಿದ ಎಲ್ಲರನ್ನೂ ಕೃತಜ್ಞತೆಯಿಂದ ನೆನೆದರು.

ಭದ್ರಾವತಿ ರೋಟರಿ ಕ್ಲಬ್‌ನ ರೊ.ಶೈಲೇಂದ್ರ, ರೊ.ಡಾ. ಮಲ್ಲಿಕಾರ್ಜುನರವರು ಸೇರಿ ಧರಣಿ ಮಂಡಲ ಮಧ್ಯದೊಳಗೆ ಹಾಡಿನ ರಾಗಕ್ಕೆ ಅನುಗುಣವಾಗಿ ರೋಟರಿಯ ಬಗೆಗಿನ ಕವನ ವಾಚನ ಮಾಡಿ ಹೊಗಳಿಕೆಗೆ ಪಾತ್ರರಾದರು.

ಮುಖ್ಯ ಅತಿಥಿಗಳಾದ ಡಾ. ಹರಿಪ್ರಸಾದ್ ಜಿ.ವಿ.ಯವರು ಅಂದು ಸಾಮಾಜಿಕ ಸಾಮರಸ್ಯ ಎಂಬ ವಿಚಾರವಾಗಿ ಇತಿಹಾಸದ ಪುಟಗಳಲ್ಲಿ ಅಡಗಿ ಹೋದ ಹಲವಾರು ಧಾರುಣ ಘಟನೆಗಳನ್ನು ಉಲ್ಲೇಖಿಸಿ, ಆಗಮಿಸಿದ್ದ ರೋಟೇರಿಯನ್ನರು ಸಭಿಕರುಗಳಿಗೆ ಮನತಟ್ಟುವಂತೆ ಮಾತನಾಡಿ ಅವರೆಲ್ಲರೂ ಭಾವುಕರಾಗುವಂತೆ ಮಾಡಿದರು.

ಜಾಗತಿಕ ಚಿಂತನೆ ಸ್ಥಳೀಯವಾಗಿ ಕಾರ್ಯ ಎಂಬ ನೀತಿಯಡಿ ಸಾಮಾಜಿಕವಾಗಿ ಕಾರ್ಯವನ್ನು ಮಾಡುತ್ತಿರುವ ರೋಟರಿಯು ನೂರಾರು ವರ್ಷಗಳ ಹಿಂದೆ ಚಿಕಾಗೋದ 711 ನೇ ಕೊಠಡಿಯಲ್ಲಿ ಕೇವಲ 4 ಜನರಿಂದ ಪ್ರಾರಂಭವಾದದ್ದು ಉಲ್ಲೇಖಿಸಿದ ಅವರು ಸಮಾಜದ ಸಾಲವನ್ನು ಹೇಗೆ ತೀರಿಸಬೇಕು ಎನ್ನುತ್ತಾ ಈಗ ನಮಗೆ ಆ ಅದೃಷ್ಟ ದೊರಕಿದೆ. ವಿದ್ಯುತ್ ಸಂಶೋಧಿಸಿ ಎಡಿಸನ್ ಸಾಲ ಕೊಟ್ಟಿದ್ದಾರೆ. ಅಭಿವೃದ್ಧಿಗೆ ಸಾಲ ತೆಗೆದುಕೊಂಡಿದ್ದೇವೆ. ಯಾರ್ಯಾರಿಂದ ಆ ತರಹೆಯ ಸಾಲ ತೆಗೆದುಕೊಂಡಿದ್ದೇವೋ ಅವರಿಗೆಲ್ಲಾ ನಾವು









ಸಾಲ ತೀರಿಸಬೇಕಾಗಿದೆ ಹಾಗೂ ಕೃತಜ್ಞತೆ ಹೇಳಲೇ ಬೇಕಾಗಿದೆ. ಜಗತ್ತಿನಾದ್ಯಂತ ಸಾಲ ತೆಗೆದುಕೊಂಡಿರುವ ನಾವು ಅದನ್ನು ತೀರಿಸಲೇ ಬೇಕಾಗಿದೆ. ಬೇರೆ ದೇಶಗಳಲ್ಲಿ ಗಲಾಟೆಯಾಗಿ ತೊಂದರೆಯಾದರೆ ನಮ್ಮೂರಿನಲ್ಲಿ ದರ ಏರುತ್ತದೆ. ಆದುದರಿಂದ ಸಾಮರಸ್ಯವಿಲ್ಲದಿದ್ದಲ್ಲಿ ಬದುಕಿಲ್ಲ. ಸಮಸ್ಯೆಗಳೆಲ್ಲವೂ ಮನುಷ್ಯನಿಗೆ ಮಾತ್ರ. ಯಾವುದೇ ಪ್ರಾಣಿ ಪಕ್ಷಿಗಳಿಗಿಲ್ಲ ಎಂದರು.

ಜೀವ ಸಂಕುಲಗಳ ಸರಪಣಿಯಲ್ಲಿ ಎಲ್ಲಾ ಜೀವರಾಶಿಗಳು ಒಂದಕ್ಕೊಂದು ಕೊಂಡಿಯಾಗಿದೆ. ಎಲ್ಲಕ್ಕೂ ಮನುಷ್ಯನಿಗೆ ಮಾತ್ರ ಸಮಸ್ಯೆಯಿದ್ದು, ಸಾಮರಸ್ಯ ಮತ್ತು ಹೊಂದಾಣಿಕೆ ಇಲ್ಲದಿದ್ದಲ್ಲಿ ನಾವು ಕಸಕ್ಕೆ ಸಮವಾಗುತ್ತೇವೆ. ಭ್ರಾತೃತ್ವ, ದಯಯೇಧರ್ಮದ ಮೂಲ. ಮನುಷ್ಯನ ತೀವ್ರ ತರಹದ ರೋಗಗಳಿಗೆ ಕಾರಣ, ನಮ್ಮಲ್ಲಿನ ಅಹಂಕಾರ, ನಗರವಾಸಿಗಳೆಂಬ ಅಹಂಕಾರ, ಇದಕ್ಕೆ ಆದಿವಾಸಿ ಜೀವಿಗಳ ಪಂಗಡವೊಂದರ ಉದಾಹರಿಸಿದ ಅವರು, ಆದಿವಾಸಿಗಳಿಗೆ ನಗರವಾಸಿಗಳಿಂದ ಮನೆಯ ನಿರ್ಮಾಣ ಮಾಡಿಕೊಟ್ಟು ಅವರುಗಳು ಅಲ್ಲಿ ವಾಸಿಸಲು ಪ್ರಾರಂಭಿಸಿದಾಗಿನಿಂದ ರೋಗಗ್ರಸ್ಥರಾದರು. ಕೆಲವರು ಮರಣ ಹೊಂದಿದರು. ಈ ಮೊದಲು ಅವರು ಮರಗಳ ಮೇಲೆ ರೆಂಬೆ ಕೊಂಬೆಗಳ ಮೇಲೆ ಬದುಕಿ ಜೀವಿಸಿ ಹಾಯಾಗಿದ್ದರು.

ಸಾಮರಸ್ಯದಿಂದ ಒಟ್ಟಿಗಿರಲು ಬದುಕಲು 1905 ರಂದು ಒಂದು ಒಳ್ಳೆಯ ಸಂಘಟನೆಯನ್ನು ಹುಟ್ಟು ಹಾಕಿದ್ದಾರೆ. ಅದು ಶ್ಲಾಘನೀಯ. ಇನ್ನೊಬ್ಬರನ್ನು ನೋಡಿ ನಾವು ಕಲಿಯುವುದು ಬೇಕಾದಷ್ಟಿದೆ. ಅಲ್ಲದೇ ನಮ್ಮನ್ನು ನಾವು ನೋಡಬೇಕು, ಆತ್ಮಾವಲೋಕನ ಮಾಡಿಕೊಳ್ಳಬೇಕು. ಆತ್ಮಾವಲೋಕನ ಶಿಕ್ಷಕರು ಬೇಕು ಎಂದಿದೆ ಭಾರತ. ಶ್ರೀ ಎಸ್‌ಎಲ್. ಭೈರಪ್ಪನವರೊಂದಿಗೆ ಜಪಾನ್‌ಯುವಕರ ನಡುವಳಿಕೆಯ ಬಗ್ಗೆ ಉದಾಹರಿಸಿ ಮಾತನಾಡಿದರು. ನಿಜವಾಗಿಯೂ ಜಪಾನ್‌ರವರು ಸಹನೆ ಹೊಂದಿದವರಲ್ಲ. ಆದರೆ ಹಿರೋಶಿಮ ನಾಗಸಾಕಿ ಪಟ್ಟಣದ ಮೇಲಿನ ದಾಳಿಯ ನಂತರ ಬದಲಾದರು.

ಜಗತ್ತಿನ ಅತ್ಯಂತ ಶ್ರೀಮಂತ ರಾಕ್‌ಫೆಲ್ಲರ್‌ನ ಕಥೆಯೊಂದನ್ನು ತಿಳಿಸುತ್ತಾ, ಅವನಿಗೆ ಕಾಯಿಲೆಯಿಂದ ಸದ್ಯದಲ್ಲೇ ಮರಣವೆಂದು ಡಾಕ್ಟರುಗಳು ಘೋಷಿಸಿದರು. ಅವನು ತನಗಿರುವ ಅಪಾರ ಆಸ್ತಿಗಳನ್ನು ದಾನ ನೀಡುತ್ತಾ ಬಂದು ಕೊನೆಗೆ ತನ್ನ 92 ವಯಸ್ಸಿನಲ್ಲಿ ನಿಧನನಾದನು. ಅಂದರೆ ಕೊಡುವ ಮನಸ್ಸು ಹಾಗೂ ಸ್ವಾವಲೋಕನ ಅವನನ್ನು ಹೆಚ್ಚು ಕಾಲ ಬದುಕುಳಿಯುವಂತೆ ಮಾಡಿತು ಎಂದರು. ಅವನು ಕಾಯಿಲೆಯ ಚಿಂತನೆಯಿಂದ ದೂರವಾಗಿ, ಮಾನಸಿಕ ನೆಮ್ಮದಿ ಕೊಂಡುಕೊಂಡ ಎಂದರು. ರಾಮನಾಥ ಶಾಸ್ತ್ರಿ ಮತ್ತು ಅಬ್ದುಲ್ ಕಲಾಂ ಬಾಲ್ಯದ ಮಿತ್ರರು. ಅವರ ಶಿಕ್ಷಕರು ಜಾತಿಯ ನಿಮಿತ್ತ ಅವರನ್ನು ಬೇರೆ ಮಾಡಲು ನೋಡಿದಾಗ ರಾಮನಾಥ ಶಾಸ್ತ್ರಿಯವರ ತಂದೆ ಪಕ್ಷಿ ಲಕ್ಷ್ಮಣಶಾಸ್ತ್ರಿಯವರು ಮಕ್ಕಳಲ್ಲಿ ವಿಷ ಬೀಜ ಬಿತ್ತ ಬೇಡಿ ಎಂದುದನ್ನು ಉಲ್ಲೇಖಿಸಿ ಇವೆಲ್ಲವೂ ಸಮಾಜದ ಸಾಮರಸ್ಯಕ್ಕೆ ಉದಾಹರಣೆಗಳು ಎಂದರು.

ಭಾರತದ ಜನತೆಯ ಪರಂಪರೆ ಹಾಗೂ ನಡುವಳಿಕೆಗಳನ್ನು ಉಲ್ಲೇಖಿಸಿ ಮಾತನಾಡಿದ ಮುಖ್ಯ ಅತಿಥಿ ಡಾ. ಹರಿಪ್ರಸಾದ್, ಕತ್ತಲಾಗುವಾಗ ಉಗುರು ತೆಗೆಯಬೇಡ ಎಂದು ಮಕ್ಕಳಿಗೆ ಹೇಳುತ್ತಿದ್ದರು. ಏಕೆಂದರೆ ನಂಬಿಕೆಯೆಂದರೆ ಗಾಯಗೊಂಡ ಅಶ್ವತ್ಥಾಮ ಬರುತ್ತಾನೆ ಉಗುರುಗಳು ಆ ಗಾಯಗಳಿಗೆ ತಾಗಿ ನೋವಾಗಬಾರದು. ಹಾಗೆಯೇ ಹಲ್ಲುಗಳು ಬಿದ್ದಾಗ ಅವನ್ನು ಸಗಣಿಯಲ್ಲಿ ಹಾಕಿ ಮನೆ ಮೇಲೆ ಹಾಕು ಎಂದರು. ಏಕೆಂದರೆ ಪಕ್ಷಿಗಳು ಅದನ್ನು ಆಹಾರವೆಂದು ತಿಂದು ಗಂಟಲಿಗೆ ಸಿಕ್ಕುತ್ತವೆ. ಇಂಥಹ ಉದಾರವಾದ, ಇನ್ನೊಬ್ಬರ ಒಳಿತಿಗಾಗಿ ಯೋಚಿಸುವ ಸಮಾಜವಿರುವಾಗ ಸಾಮರಸ್ಯಕ್ಕೆ ಕೊರತೆ ಎಲ್ಲಿದ್ದೀತು. ಇವೆಲ್ಲವೂ ನಮ್ಮ ಜೀವನ ಪದ್ಧತಿಯಲ್ಲಿ ಹಾಸುಹೊಕ್ಕಾಗಿತ್ತು. ಆದರೆ ಈಗ ಬದಲಾಗಿದ್ದು, ನಮ್ಮಗಳ ಅಹಂನಿಂದ ಯುದ್ಧದಂತಹ ಪರಿಸ್ಥಿತಿಗಳು ನಿರ್ಮಾಣವಾಗಿದೆ. ನಾವು ಆತ್ಮಾವಲೋಕನದಿಂದ ನಮ್ಮನ್ನು ಬದಲಾಯಿಸಿಕೊಂಡರೆ ಒಳ್ಳೆಯದು ಎಂದರು.

ನಾಜಿಗಳಿಂದ ಬಂಧಿಸಲ್ಪಟ್ಟ ಡಾ.ಜಾನ್ಸನ್ ನರಳಿ ಸಾಯಬೇಕು ಎಂಬ ಉದ್ದೇಶದಿಂದ ಅವರ ಕುಟುಂಬ ಅವನ ಕಣ್ಣೆದುರಿಗೆ ಕೊಲ್ಲಲ್ಪಟ್ಟರು. ಆದರೆ ಆತನ ಸಹನೆ ಮತ್ತು ಔದಾರ್ಯದಿಂದ ಮತ್ತು ಇನ್ನೊಬ್ಬರಿಗೆ (ಶತ್ರುಗಳಿಗೂ) ಮಾಡುವ ಪರೋಪಕಾರಗುಣದಿಂದ ಎಲ್ಲರ ಮನಸ್ಸು ಗೆದ್ದು ಅವರಿಂದ ಗುಪ್ತವಾಗಿ ಬಿಡುಗಡೆಗೊಳ್ಳಲ್ಪಟ್ಟು ಜಾಗತಿಕ ವ್ಯಕ್ತಿಯಾದ. ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ತನ್ನ ಅಮೂಲ್ಯ 27 ವರ್ಷಗಳನ್ನು ಕೇವಲ ಸಣ್ಣ ಕೋಣೆಯಲ್ಲಿ ಕಳೆದು ಬಿಡುಗಡೆಯ ನಂತರ ಅವನು ಹೇಳಿದ ನನ್ನ ಬಂಧಿಸಬಹುದು ಆದರೆ ನನ್ನ ಸಂತೋಷವನ್ನು ಯಾರು ಕಿತ್ತುಕೊಳ್ಳಲಾರರು. ಇದರಿಂದ ದಕ್ಷಿಣ ಆಫ್ರಿಕಾದಲ್ಲಿ ರಕ್ತಪಾತವಾಗಲಿಲ್ಲ. ಸಲ್ಮಾನ್‌ಖಾನ್ ತಂಗಿ (ಅನಾಥ) ಹಿಂದುವಾಗಿದ್ದುದರಿಂದ ಅವಳನ್ನು ಹಿಂದೂ ಸಂಪ್ರದಾಯದಂತೆ ಮದುವೆ ಮಾಡಿಕೊಟ್ಟಿದ್ದಾರೆ. ಇವೆಲ್ಲವೂ ಸಾಮರಸ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಭಾರತಕ್ಕೆ ಮನುಷ್ಯತ್ವ, ಜೀವತ್ವ, ಇವ ನಮ್ಮವ ಎಂಬ ಭಾವವೇ ಅಗತ್ಯವಾಗಿದೆ ಎಂದರು.

ಸಹಾಯಕ ಗವರ್ನರ್ ರೊ.ಎಸ್. ಆರ್ ನಾಗರಾಜ್‌ರವರು ಮಾತನಾಡಿ, ಇಂದಿನ ಸಮಾರಂಭ ರೂಪುಗೊಂಡ ಬಗ್ಗೆ ಮಾತನಾಡಿ ತಾವುಗಳೆಲ್ಲ ಆಗಮಿಸಿ ಸಹಕಾರ ಕೊಟ್ಟಿದ್ದಕ್ಕೆ ಧನ್ಯವಾದ ತಿಳಿಸಿದರು. ಮುಖ್ಯ ಅತಿಥಿಗಳಾದ ಡಾ. ಹರಿಪ್ರಸಾದ್‌ರವರಿಗೆ ರೊ.ಪಿಡಿಜಿ. ಡಾ. ಪಿ.ನಾರಾಯಣ, ರೊ. ಕೆ. ಸೂರ್ಯನಾರಾಯಣ ಉಡುಪರು, 2027–28 ನೇ ಸಾಲಿಗೆ ಚುನಾಯಿತ ಗವರ್ನರ್ ರೊ. ವಸಂತ ಹೋಬಳೀದಾರ್ ಎಲ್ಲಾ ಸೇರಿ ಸನ್ಮಾನಿಸಿದರು. ಕೊನೆಯಲ್ಲಿ ರೊ.ಕಿರಣ್‌ಕುಮಾರ್ ಅಧ್ಯಕ್ಷ ರೋಟರಿ ಶಿವಮೊಗ್ಗ ಸೆಂಟ್ರಲ್ ಇವರು ವಂದನಾರ್ಪಣೆ ಮಾಡಿದರು. ರೊ. ಎಸ್.ಜಿ. ಉಷಾರವರು ಕಾರ್ಯಕ್ರಮದ ನಿರೂಪಣೆಯನ್ನು ಅಚ್ಚುಕಟ್ಟಾಗಿ ಮಾಡಿ, ಸಭೆಯ ಯಶಸ್ಸಿನಲ್ಲಿ ಪಾಲ್ಗೊಂಡರು. ಕಾರ್ಯಕ್ರಮದ ನಂತರ ಪುಷ್ಕಳವಾದ ಭೋಜನ ಏರ್ಪಾಡಾಗಿತ್ತು.



## ಸಂಪಾದಕೀಯ

### ಶಿವರಾತ್ರಿ–ಶಿವನ ಬಗ್ಗೆ ಒಂದಿಷ್ಟು ಮಾತಾಡೋಣ

ಒಬ್ಬ ರಾಕ್ಷಸ ಶಿವನನ್ನು ಕುರಿತು ಘೋರವಾದ ತಪಸ್ಸು ಮಾಡಿದ. ಈ ರಾಕ್ಷಸರಿಗೆ ತಪಸ್ಸು ಘೋರವಾಗಿದ್ದರೆ ಮಾತ್ರ ಅದು ಒಳ್ಳೆಯ ತಪಸ್ಸು, ಇರಲಿ, ಆ ರಾಕ್ಷಸನ ಆ ಘೋರ ತಪಸ್ಸನ್ನು ಮೆಚ್ಚಿ ಶಿವ ಪ್ರತ್ಯಕ್ಷನಾದ 'ಭಕ್ತಾ, ನಿನಗೇನು ವರ ಬೇಕು ಕೇಳು, ಕೊಡುತ್ತೇನೆ' ಅಂದ. ಘೋರ ತಪಸ್ಸು ಮಾಡಿದವನು ಘೋರವಾದ ವರವನ್ನೇ ಕೇಳಬೇಕಲ್ಲವೆ? ಕೇಳಿದ. 'ನಾನು ಯಾರ ತಲೆಯ ಮೇಲೆ ಕೈ ಇಡುತ್ತೇನೋ ಅವರು ಅಲ್ಲೇ ಭಸ್ಮವಾಗಬೇಕು' ಹಿಂದು ಮುಂದು ಯೋಚಿಸಲಿಲ್ಲ ಶಿವ. ಥಟ್ಟಂತ ವರ ಕೊಟ್ಟೇ ಬಿಟ್ಟ. ಹಾಗಾದರೆ ಕೊಟ್ಟ ವರ ಪರೀಕ್ಷೆಯಾಗಬೇಕಲ್ಲವೇ? ಶಿವನ ತಲೆಯ ಮೇಲೆ ಕೈ ಇಟ್ಟು ಪರೀಕ್ಷಿಸಲು ಶಿವನನ್ನೇ ಅಟ್ಟಿಸಿಕೊಂಡು ಹೋದ ಆ ರಾಕ್ಷಸ ಭಸ್ಮಾಸುರ. ಮುಂದಿನ ಕತೆ ನಿಮಗೂ ಗೊತ್ತು ವಿಷ್ಣು ಮೋಹಿನಿಯಾಗಿ ಬಂದ. ರಾಕ್ಷಸ ಅವಳ ಮೋಹಕ್ಕೆ ಬಿದ್ದ. ಭಸ್ಮಾಸುರ ಮೋಹಿನಿಯೊಂದಿಗೆ ಆನಂದದಿಂದ ನರ್ತಿಸುತ್ತಾ, ಮೈ ಮರೆತು, ತನ್ನ ತಲೆಯ ಮೇಲೆ ತನ್ನ ಹಸ್ತವನ್ನೇ ಇಟ್ಟುಕೊಂಡು ಭಸ್ಮವಾಗಿ ಹೋದ.

ಹೀಗೆ ಹಿಂದು ಮುಂದು ಯೋಚಿಸದೆ ವರ ಕೊಟ್ಟುಬಿಡುವುದರಲ್ಲಿ ಶಿವ ಅಗ್ರಗಣ್ಯ. ಆದ್ದರಿಂದಲೇ ಶಿವನನ್ನು ಭೋಳೇ ಶಂಕರ ಅಂತ ಕರೆಯುತ್ತಾರೆ ಭಕ್ತರು. ಈ ಭೋಳೆ ಅಥವಾ ಭೋಲೆ ಅಂದರೇನು ಗೊತ್ತೆ? ನಮ್ಮಲ್ಲಿ ಭೋಳೆ ಸ್ವಭಾವ ಅನ್ನುತ್ತೀವಲ್ಲ, ಅಂದರೆ ಮುಗ್ಧ, ಹಿಂದು ಮುಂದು ತಿಳಿಯದವನು, ಯಾರದೋ ಮಾತಿಗೆ ಸುಲಭವಾಗಿ ಮರುಳಾಗುವವನು, ಅಷ್ಟೇನೂ ಬುದ್ಧಿವಂತನಲ್ಲದವನು, ಮರೆವಿನ ಸ್ವಭಾವದವನು, ಇತ್ಯಾದಿ.

ಅರೆರೆ, ನಾವು ಪೂಜಿಸುವ ಶಿವನನ್ನು ಹೀಗೆಲ್ಲಾ ಕರೆಯುವುದು ತಪ್ಪಲ್ಲವೇ? ಅಂದರೆ ಅಲ್ಲ. ಇವೆಲ್ಲವೂ ಸದ್ಗುಣಗಳೇ. ಮುಗ್ಧತೆ ಕೂಡಾ ಸದ್ಗುಣವಲ್ಲದಿದ್ದರೆ ನಮ್ಮ ದೇವರನ್ನು ನಾವು ಹೀಗೆ ಕರೆಯುತ್ತಿರಲಿಲ್ಲ. ಬುದ್ಧಿಯ ಪ್ರಪಂಚದಲ್ಲಿ ಬುದ್ಧಿಯೊಂದೇ ಶ್ರೇಷ್ಠ ಎಂಬ ಅಭಿಪ್ರಾಯವಿರುವ ನಮಗೆ ಮುಗ್ಧತೆ ಎಂಥಾ ದೈವೀಗುಣ ಎಂಬುದು ತಿಳಿಯುವುದಿಲ್ಲ.

ಮಕ್ಕಳು ದೇವರಂತೆ ಎಂದು ಭಾವಿಸುವುದು ಕೂಡಾ ಈ ಮುಗ್ಧತೆ ಎಂಬ ದೈವೀಗುಣಕ್ಕಾಗಿಯೇ. ಯಾರನ್ನು ಪ್ರೀತಿಸಿದರೆ, ಅಥವಾ ದ್ವೇಷಿಸಿದರೆ, ಯಾರಿಗೆ ಏನು ಕೊಟ್ಟರೆ ಅಥವಾ ಕೊಡದಿದ್ದರೆ ನಮಗೇನು ಲಾಭ ಎಂದು ಯೋಚಿಸುವ ಬುದ್ಧಿವಂತರಿಗೆ ಈ ಮುಗ್ಧತೆ ಎನ್ನವುದು ಮೂರ್ಖತನ ಎಂದಷ್ಟೇ ಕಾಣಿಸುತ್ತದೆ.

ನಮ್ಮ ಶಿವ ಎಷ್ಟು ಭೋಳೆ ಅಂದರೆ ನಮ್ಮ ಭಕ್ತಿ ಎಷ್ಟು ನಿಜ ಅಥವಾ ಮೋಸ ಎಂಬುದು ಕೂಡಾ ಅವನಿಗೆ ತಿಳಿಯುವುದಿಲ್ಲ.

ನಾವು ಬಿಡಿ ಮೋಸ ಹೋಗುವವರು ಸಿಕ್ಕರೆ ಅವನು ಭಗವಂತನಾದರೇನು? ಸಂತೋಷವಾಗಿ ಮೋಸ ಮಾಡಿ ಫಲ ಪಡೆಯುತ್ತೇವೆ.

ಹೌದಾದರೆ ಹೌದೆನ್ನಿ... ಇಲ್ಲವಾದರೆ ಇಲ್ಲವೆನ್ನಿ...

• ರೊ. ಎಂ. ಮಾಧವಾಚಾರ್




ರೋಟರಿ ಜಿಲ್ಲಾ ಮಟ್ಟದ ರಹಲ ಲೀಡರ್‌ಶಿಪ್ ಡೆವಲಪ್ಮೆಂಟ್ ವಿಶೇಷ ಕಾರ್ಯಕ್ರಮದಲ್ಲಿ ನಮ್ಮ ಕ್ಲಬ್ ಕಾರ್ಯದರ್ಶಿ ಎನ್. ಜಿ. ಉಷಾರವರು ಅತಿಥಿ ಉಪನ್ಯಾಸಕರಾಗಿ ಲೀಡರ್ ಶಿಪ್ ಬಗ್ಗೆ ಮಾತನಾಡಿದರು.





**ROTARACT Members Attending RAHLA**




ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದವರು ಏರ್ಪಡಿಸಿದ ಮಹಾಶಿವರಾತ್ರಿ ಮಹೋತ್ಸವ ಕಾರ್ಯಕ್ರಮದಲ್ಲಿ ನಮ್ಮ ಕ್ಲಬ್ ಅಧ್ಯಕ್ಷರಾದ ರೊ. ಕೆ ಸೂರ್ಯನಾರಾಯಣ ಉಡುಪರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

### ಚಿಂತನ

ಜೀವನದಲ್ಲಿ ಹಣಕ್ಕಿಂತ ಗುಣ ಮುಖ್ಯ
ಯಾಕಂದ್ರೆ ಹಣ ಅಥವಾ ಬಂಗಾರವನ್ನು
ನಾವೇ ಕಾಯಬೇಕು.
ಆದರೆ ನಮ್ಮ ಒಳ್ಳೆಯ ಗುಣ ನಡೆತೆಗಳು
ನಮ್ಮನ್ನು ಕಾಯುತ್ತವೆ.



– ರೊ. ಕೆ. ಸೂರ್ಯನಾರಾಯಣ ಉಡುಪ

## *Happy Birthday Wishes*



*Aravind D.C.*
*26th Feb*





*Pranav Swaroop*
*1st Mrch*

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495